# ವಾರ್ಷಿಕ ಪರೀಕ್ಷೆ–ಮಾದರಿ 1

## 10 ನೆಯತರಗತಿ – ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ

**ಸಮಯ : 3.00 ಗಂಟೆಗಳು** **ಗರಿಷ್ಠ ಅಂಕಗಳು : 100**

---

**ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಸೂಕ್ತವಾದಉತ್ತರವನ್ನು ಆರಿಸಿ. ಕ್ರಮಾಕ್ಷರದೊಂದಿಗೆ ಬರೆಯಿರಿ. 6 × 1 = 6**

1. ಇವುಗಳಲ್ಲಿ ಕೃದಂತ ಭಾವನಾಮಕ್ಕೆಉದಾಹರಣೆ
   ಅ) ಅಂಜಿಕೆ ಆ) ಮಾಡಿದ ಇ) ಚೆಲುವಿಕೆ ಈ) ಬಳೆಗಾರ
2. ಇವುಗಳಲ್ಲಿ ಅಂಶಿ ಸಮಾಸಕ್ಕೆಉದಾಹರಣೆ
   ಅ) ಕೈನೀಡು ಆ) ತಲೆನೋವು ಇ) ಹಿಂಬಾಗಿಲು ಈ) ಮೆಲ್ನುಡಿ
3. ಇವುಗಳಲ್ಲಿ ಸಂಭಾವನಾರ್ಥಕಕ್ರಿಯಾಪದಕ್ಕೆಉದಾಹರಣೆ
   ಅ) ನಿಂತಾನು ಆ) ಹೇಳನು ಇ) ತಿಂದ ಈ) ಹೊಗಳುವ
4. ಇವುಗಳಲ್ಲಿ ಅರಬ್ಬೀಯಿಂದಕನ್ನಡಕ್ಕೆ ಬಂದಿರುವ ಪದ
   ಅ) ತಂಬಾಕು ಆ) ಇನಾಮು ಇ) ಸಲಾಮು ಈ) ಚೌಕಾಷಿ
5. ಇವುಗಳಲ್ಲಿ ಜೋಡುನುಡಿಗೆಉದಾಹರಣೆ
   ಅ) ಮೆಲ್ಲನೆ ಆ) ಮೊತ್ತಮೊದಲು ಇ) ಸತಿಪತಿ ಈ) ಸೂರ್ಯಾಸ್ತ
6. ಇವುಗಳಲ್ಲಿ ವಿಧ್ಯರ್ಥಕಕ್ರಿಯಾಪದಕ್ಕೆಉದಾಹರಣೆ
   ಅ) ತಿನ್ನಲಿ ಆ) ತಿಂದಾನು ಇ) ತಿನ್ನನು ಈ) ತಿಂದೀತು

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ. 4× 1 = 4**

7. ಮರದ : ಷಷ್ಠಿ : : ಮರದತ್ತಣಿಂ: ____________
8. ಜಡ : ಮಂದ : : ಶಾಲಿವನ : ________
9. ಬಲ್ಗಯ್ಯ : ಆದೇಶಸಂಧಿ : : ಪಯಶ್ಶಯನ : ___________
10. ವ್ಯಯ : ಬೀಯ : : ಬೇಹಾರಿ : ________

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿಉತ್ತರ ಬರೆಯಿರಿ. 7 × 1 = 7**

11. ವೆಸ್ಟ್ ಮಿನ್‌ಸ್ಟರ್ ಅಬೆ ಎಷ್ಟು ವರ್ಷ ಹಳೆಯದು?
12. ನಾಲ್ವಡಿಕೃಷ್ಣರಾಜಒಡೆಯರ್‌ರವರ ಮುಂಗಾಣ್ಕೆಯಕೊಡುಗೆ ಏನು?
13. ಈ ಜಗತ್ತುಯಾವುದರಿಂದ ನರಳುತ್ತಿದೆ?
14. ಧರ್ಮಬುದ್ಧಿಯುತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?
15. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವರು ಯಾರು?
16. ಪಶ್ಚಿಮ ದಿಕ್ಕಿಗೆ ಒಡೆಯಯಾರು?
17. ವಿವೇಕಾನಂದರು ಯಾವ ವ್ಯವಸ್ಥೆಯನ್ನು ವಿರೋಧಿಸುತ್ತಾರೆ?

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10 × 2 = 20**

18. ಶಬರಿಯುರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.
19. ಶಾನುಭೋಗರು ಮೂರ್ಛೆ ಬಿದ್ದಾಗ ಏನೇನು ನಡೆಯಿತು?
20. ಧರ್ಮಬುದ್ಧಿಯು ತನ್ನ ಮೇಲೆ ಬಂದ ಆರೋಪದಿಂದ ಹೇಗೆ ಬಿಡುಗಡೆ ಹೊಂದಿದನು?
21. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?
22. ವಸಂತ ಮುಖ ತೋರಲಿಲ್ಲ ಕವನದಲ್ಲಿ ಮುಟ್ಟಿಯ ಪ್ರಶ್ನೆಗಳಾವುವು?
23. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು. ಏಕೆ?

24. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?
25. ಭಗತ್‌ಸಿಂಗ್ ವೀರಯೋಧನಾದುದು ಹೇಗೆ?
26. ಕೃಷ್ಣನು ಕೌರವೇಂದ್ರನನ್ನುಕೊಂದನುಎಂದುಕರ್ಣ ಹೇಳಲು ಕಾರಣವೇನು?
27. ಕವಿಯಾತ್ಮವು ಹಸುರುಗಟ್ಟಲುಕಾರಣವಾದ ಹಿನ್ನೆಲೆಯ ಅಂಶಗಳೇನು?

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಕೃತಿಗಳನ್ನು ಪರಿಚಯಿಸಿ, ವಾಕ್ಯರೂಪದಲ್ಲಿಟಿಪ್ಪಣಿ ಬರೆಯಿರಿ.**

28. "ಪು.ತಿ.ನರಸಿಂಹಾಚಾರ್" **2 × 3 = 6**
29. "ಕುಮಾರವ್ಯಾಸ"

**ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 × 3 = 3**

30. ಕೆರೆಯಂಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
ಜ್ಜೆರೆಯೊಳ್

**ಕೊಟ್ಟಿರುವ ವಾಕ್ಯದಲ್ಲಿರುವಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿರಿ. 1 × 3 = 3**

31. ಎನ್ನ ಬಗೆಗನಿವಾರ್ಯವೀ ಶೋಕದುಲ್ಕೆ

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂಒಂದನ್ನು ವಿಸ್ತರಿಸಿ ಬರೆಯಿರಿ. 1 × 3 = 3**

32. * ಕೂಡಿ ಬಾಳಿದರೆ ಸ್ವರ್ಗ ಸುಖ

**ಅಥವಾ**

* ಮಾತೇ ಮುತ್ತು, ಮಾತೇ ಮೃತ್ಯು

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 × 3 = 18**

33. "ತಾವುಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ"
34. "ಯಾರನ್ನು ತುಳಿದರೇನು? ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೇ! ಮಣ್ಣು, ಮಣ್ಣು!"
35. "ಏನ್ರಯ್ಯಾಏನ್ ಮಾಡ್ತಾಇದ್ದೀರಿ"
36. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್"
37. "ಸಮರದೊಳೆನಗಜ್ಜ ಪೇಟಿಽಮಾವುದುಕಜ್ಜಂ"
38. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"

**ಪದ್ಯಭಾಗವನ್ನು ಪೂರ್ಣಗೊಳಿಸಿರಿ. 1 × 4 = 4**

39. ಕಲುಷಿತ ____________ ಮತಗಳೆಲ್ಲವೂ____________

____________ ____________

____________ ಅಥವಾ ____________

____________ ಮುಟ್ಟೋಣ ____________ಬಿತ್ತೋಣ

**ಕೊಟ್ಟಿರುವ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.**

40. ಪೂಜೇರಿ ಹನುಮಾ ಬ್ಯಾಡರ ಬಾಲ ಜಡಗರಾಮ ಮಸಲತ್ತ
ಕೈಯಾನ ಹತಾರಕೊಡಬಾರದೊ, ನಾವು ನಾಲ್ಕು ಮಂದಿ ಜತ್ತ
ಹತಾರ ಹೋದಿಂದ ಬಾರದುಜೀವ ಸತ್ತು ಹೋಗುವುದುಗೊತ್ತ
ಹೊಡಿರಿ ಜಗಳ ಹೂಡಿತೀರ್ಲೆವು ಕುಮಕಿ ನಮ್ಮದ್ಯಾವತ್ತ
ಒಳಗಿಂದೊಳಗ ವಚನ ಕೊಟ್ಟರೊ ಬ್ಯಾಡರೆಲ್ಲ ಕಲ್ತ

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟುಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 × 4 = 8**

41. * ಮುದುಕಿಯುತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು?

**ಅಥವಾ**

* ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ವಿವರಿಸಿ.

42. * ಹಕ್ಕಿಯನ್ನುಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳಾವುವು?

**ಅಥವಾ**

* ಕಾಲಪಕ್ಷಿಯ ಭೌತಿಕರೂಪವನ್ನು ಕವಿ ವರ್ಣಿಸಿರುವ ಬಗೆಯನ್ನು ವಿವರಿಸಿ.

**ಕೊಟ್ಟಿರುವಗದ್ಯಭಾಗವನ್ನುಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 01×04 =04 (2+2)**

43. ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಭಾರತವನ್ನು ಸಂಚರಿಸುತ್ತಿದ್ದಾಗರಾಜಸ್ಥಾನದಖೇತ್ರಿಯ ಬಳಿ ಗ್ರಾಮಾಂತರ ಪ್ರದೇಶದಲ್ಲಿತಂಗಿದ್ದರು. ಇವರ ವ್ಯಕ್ತಿತ್ವ, ಪಾಂಡಿತ್ಯಗಳಿಗೆ ಆಕರ್ಷಿತರಾಗಿ ಅನೇಕ ಜನರು ತಂಡತಂಡಗಳಲ್ಲಿ ಬರುತ್ತಿದ್ದರು. ಸ್ವಾಮೀಜಿಯ ಬಳಿ ಅನೇಕ ರೀತಿಯ ಪ್ರಶ್ನೆಗಳನ್ನು ಕೇಳುತ್ತಿದ್ದರು. ಸ್ವಾಮೀಜಿಯ ಬಳಿ ಅನೇಕ ರೀತಿಯ ಪ್ರಶ್ನೆಗಳನ್ನು ಕೇಳುತ್ತಿದ್ದರು. ಸ್ವಾಮೀಜಿಯಿಂದಉತ್ತರವನ್ನು ಪಡೆದುಧನ್ಯತಾಭಾವದಿಂದ ಹಿಂದಿರುಗುತ್ತಿದ್ದರು. ಹಗಲು–ರಾತ್ರಿಯೆನ್ನದೆ ಮೂರು ದಿವಸಗಳ ಕಾಲ ಎಡಬಿಡದೆಜನರು ಬಂದು ಹೋಗುತ್ತಿದ್ದರು. ಆದರೆ ಬಂದವರಲ್ಲಿಯಾರೂ ಸ್ವಾಮೀಜಿಯಆಹಾರ–ವಿಶ್ರಾಂತಿಗಳ ಬಗ್ಗೆ ಯೋಚಿಸಲಿಲ್ಲ. ಮೂಲೆಯಲ್ಲಿ ನಿಂತಿದ್ದ ಬಡವನೊಬ್ಬನು, 'ಸ್ವಾಮೀಜಿ, ನಾನು ಮೂರು ದಿವಸಗಳಿಂದ ಗಮನಿಸುತ್ತಿದ್ದೇನೆ. ನೀವು ಏನೂ ಆಹಾರವನ್ನು ಸ್ವೀಕರಿಸಿದಂತೆ ಕಾಣಲಿಲ್ಲ. ನೀವು ಉಪವಾಸವಿದ್ದೀರಿ. ನಿಮ್ಮನ್ನು ನೋಡಿದರೆ ನನಗೆ ತುಂಬಾ ಸಂಕಟವಾಗುತ್ತಿದೆ ಸ್ವಾಮೀಜಿ'! ಎಂದನು. ಬಡವನ ಕಾಳಜಿಯನ್ನು ಕಂಡು ಸ್ವಾಮೀಜಿಯವರ ಹೃದಯತುಂಬಿ ಬಂದಿತು. ಹೌದು, ನಾನು ತುಂಬಾ ಹಸಿದಿದ್ದೇನೆ. ನೀನು ನನಗೇನಾದರೂತಿನ್ನಲುತಂದುಕೊಡಲು ಸಾಧ್ಯವೇ?' ಎಂದರು. ಬಡವನು ಚಪಾತಿಗಳನ್ನು ತಂದುಕೊಟ್ಟನು. ಸ್ವಾಮಿವಿವೇಕಾನಂದರು ಬಡವನು ನೀಡಿದ ಚಪಾತಿಗಳನ್ನು ಪ್ರೀತಿಯಿಂದ ಸವಿದರು ಕೃತಜ್ಞತೆಗಳನ್ನು ತಿಳಿಸಿದರು.

**ಪ್ರಶ್ನೆಗಳು :**

43) ಅ.ವಿವೇಕಾನಂದರು ಏಕೆ ಆಹಾರ ವಿಶ್ರಾಂತಿಗಳ ಬಗ್ಗೆ ಯೋಚಿಸಲಿಲ್ಲ?

43) ಆ.ಬಡವನು ವಿವೇಕಾನಂದರ ಬಗ್ಗೆ ಏಕೆ ಸಂಕಟವಾಗುತ್ತಿದೆಎಂದನು?

44. ನಿಮ್ಮನ್ನುಬೇಲೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಅಮೃತ/ಅಮರ್ಎಂದು ಭಾವಿಸಿಕೊಂಡು ನಿಮ್ಮಶಾಲೆಗೆ ಕುವೆಂಪುರವರರಾಮಾಯಣದರ್ಶನಂ ಪುಸ್ತಕದ 10 ಪ್ರತಿಗಳನ್ನು ಕಳುಹಿಸುವಂತೆ ಕೋರಿ, ಚೇತನ ಬುಕ್ ಹೌಸ್, ಮೈಸೂರುಇವರಿಗೆಒಂದು ಪತ್ರ ಬರೆಯಿರಿ. **1 × 5 = 5**

**ಅಥವಾ**

ನಿಮ್ಮನ್ನುಹೊಸಪೇಟೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಸೌಮ್ಯ/ಮನೋಜ್ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದಕನ್ನಡರಾಜ್ಯೋತ್ಸವಕಾರ್ಯಕ್ರಮದಕುರಿತು ಹಾವೇರಿಯ ಸಂಗೊಳ್ಳಿ ರಾಯಣ್ಣ ಬಡಾವಣೆಯಲ್ಲಿರುವ ನಿಮ್ಮಅಣ್ಣಚಂದ್ರುರವರಿಗೆಒಂದು ಪತ್ರ ಬರೆಯಿರಿ:

45. **ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೊಂದು ವಿಷಯಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ:**

**1 × 5 = 5**

* ಸ್ವಚ್ಛ ಭಾರತ ಅಭಿಯಾನ

**ಅಥವಾ**

* ರಾಷ್ಟ್ರೀಯ ಭಾವೈಕ್ಯತೆ

**ಙಙಙಙ**